# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.
gdcribangalore@gmail.com ದೂರವಾಣಿ: 26705053/26703176.


ಸಂಖ್ಯೆ:ಸದಂಕಾಸಂಸಂ/ಸಿ(2)/07/2016–17 ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ:10.08.2016

## ಅಧಿಸೂಚನೆ

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸ್ವಾಯತ್ತ ಸಂಸ್ಥೆಯಲ್ಲಿ ಖಾಲಿಯಿರುವ 03 ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

**1. ಹುದ್ದೆಯ ಪದನಾಮ, ವೇತನ ಶ್ರೇಣಿ, ನಿಗದಿಪಡಿಸಿರುವ ವಿದ್ಯಾರ್ಹತೆ, ಅನುಭವ ವಿವರ ಈ ಕೆಳಕಂಡಂತಿವೆ.**

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ ವೇತನ ಶ್ರೇಣಿ | ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ |
|---|---|---|
| 1 | ವಾಹನ ಚಾಲಕರು ರೂ.11600–21000 | 1) 7ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>2) ರಾಜ್ಯ ಸರ್ಕಾರದಿಂದ ನೀಡಿದ ಚಾಲ್ತಿಯಲ್ಲಿರುವ ಲಘು ಹಾಗೂ ಭಾರಿ ವಾಹನ ಚಾಲನಾ ಪರವಾನಗಿಯನ್ನು ಹೊಂದಿ ಕನಿಷ್ಠ 2 ವರ್ಷಗಳಾಗಿರಬೇಕು. (HPV) ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.<br>3) ರಾಜ್ಯ ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಹೊಂದಿದ ಸಂಸ್ಥೆಗಳಲ್ಲಿ ವಾಹನ ಚಾಲನೆಯಲ್ಲಿ ಕನಿಷ್ಠ ಎರಡು ವರ್ಷ ಅನುಭವ ಹೊಂದಿರಬೇಕು.<br>4) ಪ್ರಥಮ ಚಿಕಿತ್ಸೆ ದೃಢಪತ್ರ ಹೊಂದಿರಬೇಕು. |

**2) ಹುದ್ದೆಗಳ ವರ್ಗೀಕರಣದ ವಿವರ:–**

**(ಉಳಿಕೆ ಕೇಡರ್ Residuary Cadre)** ಪರಿಶಿಷ್ಟ ಜಾತಿ–1, ಸಾಮಾನ್ಯ ಅಭ್ಯರ್ಥಿ–01
ಹೈದರಾಬಾದ್ ಕರ್ನಾಟಕ ಪ್ರದೇಶ (ಸ್ಥಳೀಯ ಕೇಡರ್) Hyderabad Karnataka Region (local cadre) ಪರಿಶಿಷ್ಟ ಪಂಗಡ – 1 ಹುದ್ದೆ

ಯಾವುದೇ ಕಾರಣಗಳನ್ನು ನೀಡದೇ ಪ್ರಕಟಣೆ ನೀಡಿರುವ ಹುದ್ದೆಗಳ ಸಂಖ್ಯೆಯಂತೆ ನೇಮಕಾತಿ ಮಾಡಲು ಅಥವಾ ಅಗತ್ಯತೆ ಆಧಾರದ ಮೇಲೆ ಬದಲಾವಣೆ ಮಾಡಲು ಅಥವಾ ಇಡೀ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಅಧಿಕಾರವನ್ನು ಆಯ್ಕೆ ಸಮಿತಿಯು ಹೊಂದಿದೆ.

3) **ವಯೋಮಿತಿ:–** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಈ ಕೆಳಕಂಡ ಕನಿಷ್ಠ ವಯೋಮಿತಿ ಹೊಂದಿರಬೇಕು ಮತ್ತು ಗರಿಷ್ಠ ವಯೋಮಿತಿ ಮೀರಿರಬಾರದು.

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಪ.ಜಾತಿ, ಪ.ಪಂ ಮತ್ತು ಪ್ರವರ್ಗ–1ಕ್ಕೆ | 21 ವರ್ಷಗಳು | 40 ವರ್ಷಗಳು |
| ಇತರೆ ಹಿಂದುಳಿದ ವರ್ಗಗಳ 2ಎ, 2ಬಿ, 3ಎ, 3ಬಿ, ಗಳಿಗೆ | 21 ವರ್ಷಗಳು | 38 ವರ್ಷಗಳು |
| ಸಾಮಾನ್ಯ ವರ್ಗದವರಿಗೆ | 21 ವರ್ಷಗಳು | 35 ವರ್ಷಗಳು |

4) **ವಯೋಮಿತಿ ಸಡಿಲಿಕೆ:–**

1. ಅಭ್ಯರ್ಥಿಯು ಈಗಾಗಲೇ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ (ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂಥಹವರು ಇಲಾಖಾ ವತಿಯಿಂದ ಕರ್ತವ್ಯದಿಂದ ಬಿಡುಗಡೆ ಮಾಡುವ) ಅವನು/ಅವಳು ಯಾವುದೇ ಹುದ್ದೆಯಲ್ಲಿ ಎಷ್ಟು ವರ್ಷಗಳ ಸೇವೆ ಸಲ್ಲಿಸಿರುವರೋ ಅಷ್ಟು ವರ್ಷಗಳು ಅಥವಾ 5 ವರ್ಷ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು (ಗರಿಷ್ಠ ವಯೋಮಿತಿಯಲ್ಲಿ ರಿಯಾಯಿತಿ ನೀಡಲಾಗುವುದು.
2. ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ ನಿಯಮಗಳ ಪ್ರಕಾರ ಮಾಜಿ ಸೈನಿಕರುಗಳಿಗೆ ಅವರು ಸೈನಿಕ ಸೇವೆಯಲ್ಲಿ ಸಲ್ಲಿಸಿರುವ ಸೇವಾ ಅವಧಿಯ ಜೊತೆಗೆ ಮೂರು ವರ್ಷಗಳಷ್ಟು ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.
3. ವಿಧವಾ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಗರಿಷ್ಠ 10 ವರ್ಷಗಳ ರಿಯಾಯಿತಿ ನೀಡಲಾಗುವುದು.

**ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ದೇಹದಾರ್ಢ್ಯತೆ ಹೊಂದಿರಬೇಕು.**

<table>
<tr><th>ಕ್ರಮ ಸಂಖ್ಯೆ</th><th colspan="2">ಪುರುಷರಿಗೆ</th><th>ಮಹಿಳೆಯರಿಗೆ</th></tr>
<tr><td>1</td><td colspan="2">ಎತ್ತರ–158 ಸೆಂ.ಮೀ. ತೂಕ–55 ಕೆ.ಜಿ.</td><td>ಎತ್ತರ–153 ಸೆಂ.ಮೀ. ತೂಕ–50 ಕೆ.ಜಿ.</td></tr>
<tr><td rowspan="3">2</td><td colspan="2">ಎದೆಯ ಸುತ್ತಳತೆ</td><td rowspan="3"></td></tr>
<tr><td>ನಿಶ್ವಾಸ ಸ್ಥಿತಿಯಲ್ಲಿ</td><td>ಉಚ್ಛ್ವಾಸ ಸ್ಥಿತಿಯಲ್ಲಿ ವಿಸ್ತರಣೆ</td></tr>
<tr><td>81 ಸೆಂ.ಮೀ. ಗಿಂತ ಕಡಿಮೆ ಇರಬಾರದು</td><td>5 ಸೆಂ.ಮೀ. ಗಿಂತ ಹೆಚ್ಚಳವಾಗಬೇಕು</td></tr>
<tr><td>3</td><td colspan="2">ದೃಷ್ಟಿ ಸಾಮರ್ಥ್ಯ–6/9 ಅಥವಾ 6/12</td><td>ದೃಷ್ಟಿ ಸಾಮರ್ಥ್ಯ–6/9 ಅಥವಾ 6/12</td></tr>
</table>